ಉ) ಉದ್ಭವಿಸುವುದಿಲ್ಲ. ಅಧ್ಯಕ್ಷರು ಲಿಖಿತವಾಗಿಯಾಗಲೀ, ಬಾಯಿ ಮಾತಿನಲ್ಲಾಗಲೀ ಆದೇಶವನ್ನು ಹೊರಡಿಸಿರುವುದಿಲ್ಲ. ರಾಜಭಾಷಾ ಅಧಿನಿಯಮ ೧೯೬೩ರ ಕೆಳಗೆ ಹೊರಡಿಸಲಾದ ಆದೇಶಗಳನ್ನು ಕಾರ್ಯಗತಗೊಳಿಸಲು ಮಂಜವಿ ಮಾಡಿದ್ದಾರೆ.

ಊ) ರೂ. ೧.೩೫,೪೦೮-೬೦.

ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೦೬ (ಆ) ಉತ್ತರಕ್ಕೆ ಅನುಬಂಧ

ಕನ್ನಡ ಕಾಪಲು ಮತ್ತು ಗಡಿ ಸಲಹಾ ಸಮಿತಿ ಕಾರ್ಯಕ್ರಮಗಳು:

ಕರ್ತವ್ಯಗಳು;

ಅ) ಮಹಾಜನ್ ಆಯೋಗದ ವರದಿಯ ಚೌಕಟ್ಟಿನಲ್ಲಿ ಗಡಿ ವಿಷಯವಾಗಿ ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.

ಆ) ಸರ್ಕಾರದ ರಾಜ್ಯಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪ್ರಯತ್ನಿಸಿರುವುದೇ?

ಇ) ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಿರುವುದೇ, ಹಾಗಿದ್ದರೆ ಅವುಗಳು ಯಾವುವು?

ಈ) ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು?

ಉ) ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು?

ಊ) ಸರ್ಕಾರದ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ಅತ್ಯಂತ ತೃಪ್ತಕರವಾಗಿ ಕಾರ್ಯರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ?

ಪೋಲೀಸ್ ಗೋಲಿಬಾರಿನ ಬಗ್ಗೆ ತನಿಖೆ

೧೬೬ (೪೫೧) ಶ್ರೀ ವಿ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ:—

ಡಿಸಂಬರ್ ೧೯೮೮ರಲ್ಲಿ, ಬೆಂಗಳೂರು, ಮೈಸೂರು ಮತ್ತು ತುಮಕೂರಿನಲ್ಲಿ ಹಲವಾರು ಮಂದಿ ಸಾವಿಗೆ ಕಾರಣವಾದ ಪೋಲೀಸ್ ಗೋಲಿಬಾರಿನ ಬಗ್ಗೆ ತನಿಖೆ ನಡೆಸಲು ಆಯೋಗವನ್ನು ಸರ್ಕಾರವು ರಚಿಸಲು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿರುವ ವಿಷಯವು ನಿಜವೇ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು).—

ಹೌದು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ನನ್ನ ಮೇಲು ರುಜು ಇರತಕ್ಕ ಈ ಕೆಳಕಂಡ ಸಾರ್ವಜನಿಕ ವಿಚಾರಗಳಿಗೆ ಸಂಬಂಧಪಟ್ಟ ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಅ) ಕುಂದಾಪುರ ತಾಲ್ಲೂಕಿನ ಗಂಬಿಹೊಳೆ-ಬಸರೆ ಲೋಕೋಪಯೋಗಿ ರಸ್ತೆಯಿಂದ ಹರಿಜನ ಕಾಲೋನಿಗೆ ಸೇರುವ ಗ್ರಾಮೀಣ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ,

ಆ) ಕುಂದಾಪುರ ತಾಲ್ಲೂಕಿನ ಕೊಲ್ಲೂರು ಗ್ರಾಮದ ಕಲ್ಯಾಣಿ ಗುಡ್ಡೆ ಹರಿಜನ ಕಾಲೊನಿಗೆ ನಲ್ಲಿ ನೀರಿನ ಸೌಲಭ್ಯವನ್ನು ಕೊಡುವ ಕುರಿತು,

ಇ) ಕುಂದಾಪುರ ತಾಲ್ಲೂಕಿನ ಕಂಜರ ಕೋಣಿ ಗ್ರಾಮದ ಹಳೆಗೇರಿ, ತೆಂಕಬೆಟ್ಟು, ಕೊಲಾಗಿ ಹರಿಜನ ಕೇರಿಗಳಿಗೆ ನಲ್ಲಿ ನೀರಿನ ಸೌಲಭ್ಯದ ಕುರಿತು.

ಅಧ್ಯಕ್ಷರು.— ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾವು ಒಂದು ಪ್ರಿವಿಲೇಜ್ ಮೋಷನ್‌ನ್ನು ತಮಗೆ ಕಳುಹಿಸಿಕೊಟ್ಟಿದ್ದೆನು. ದಯವಿಟ್ಟು ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಸ್ವಲ್ಪ ಹೊತ್ತು ಇರಿ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಂದಿದ್ದಾರೆ ಅದು ಮುಗಿದ ಕೂಡಲೇ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ ನನ್ನ ವಿಷಯವನ್ನು ತಾವು ತೆಗೆದುಕೊಳ್ಳಬೇಕಾಗಿತ್ತು. ಈಗಾಗಲೇ ತಡವಾಗಿದೆ. ಆದ್ದರಿಂದ ದಯವಿಟ್ಟು ನನ್ನ ನೋಟೀಸಿಗೆ ಆದ್ಯತೆ ಕೊಡಬೇಕು.

ಅಧ್ಯಕ್ಷರು.—ಅವಗಡ್ದು ಮುಗಿದ ನಂತರ ನಿಮ್ಮದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಆಗಬಹುದು ಸ್ವಾಮಿ, ಅನಂತರವಾದರೂ ದಯವಿಟ್ಟು ತೆಗೆದುಕೊಳ್ಳಿ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಜಿಲ್ಲಾ ಪರಿಷತ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ಪಟ್ಟಿಯನ್ನು ತಯಾರಿಸಿ ಅವರನ್ನು ನೇಮಕಾತಿ ಮಾಡಲು ಹೊರಡಿಸಿರುವ ಆಜ್ಞೆ ಕುರಿತು

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಮಾನ್ಯ ವಿರೋಧಪಕ್ಷದ ನಾಯಕಿಯವರು).—ಮಾನ್ಯ ಅಧ್ಯಕ್ಷರೆ, ನಾವು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಅದು ಈ ರೀತಿ ಇದೆ:

> "ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಕಾನೂನನ್ನು ಉಲ್ಲಂಘಿಸಿ ಪ್ರಜಾ ಪ್ರಭುತ್ವದ ಮೂಲಭೂತ ತತ್ವಗಳನ್ನೇ ಬದಿಗೊತ್ತಿ ಜಿಲ್ಲಾ ಪರಿಷತ್ತು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ಮತದಾರರ ಪಟ್ಟಿಯನ್ನು ತಯಾರಿಸಿ ವಿಭಾಗಾಧಿಕಾರಿಗಳು ಹೊರಡಿಸಿದ ಪ್ರಕಟಣೆ ಮತ್ತು ಮಂಡಲ ಪಂಚಾಯತ್‌ಗಳಿಗೆ ನೇಮಕಾತಿಯನ್ನು ಮಾಡಲು ಸರ್ಕಾರ ಹೊರಡಿಸಿರುವ ಕಾನೂನು ಮತ್ತು ಪ್ರಜಾಪ್ರಭುತ್ವ ನೀತಿಯ ಸಮಾಧಿ ಮಾಡಲು ಹೊರಟಿರುವ ಸರ್ಕಾರದ ನೀತಿಯನ್ನು ಕುರಿತು ಚರ್ಚಿಸುವುದು".

ಮಾನ್ಯ ಅಧ್ಯಕ್ಷರೆ, ಮಾನ್ಯ ಹೆಗಡೆಯವರ ಸರ್ಕಾರ ಡೆಮಾಕ್ರಸಿ, ಡೆಮಾಕ್ರೆಟಿಕ್ ಪ್ರಿನ್ಸಿಪಲ್ಸ್‌ಗೆ ಮೊರೆ ಹೊಕ್ಕು ಪ್ರಜಾಪ್ರಭುತ್ವ ನೀತಿಯನ್ನು ಹೊಂದಿಸಿಕೊಂಡು ಈ ಪ್ರಜಾಪ್ರಭುತ್ವ ನೀತಿಗೆ ಹೊಂದಿಕೊಂಡು ನಾವು ಆಡಳಿತವನ್ನು ನಡೆಸುತ್ತೇವೆಂದು ಹೇಳಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಚುನಾವಣೆಗಳನ್ನು ನಡೆಸಿತು. ನಿಮ್ಮ ಅಧಿಕಾರ ನಿಮಗೇ ಎಂದು ಜನರಿಗೆ ಹೇಳಿ ಚುನಾವಣೆಗಳನ್ನು ಇವರು ನಡೆಸಿದ್ದಾರೆ. ಆದರೆ ಈ ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾಗಿ ಕೆಲವು ಕೆಲಸಗಳನ್ನು ಸರ್ಕಾರ ಮಾಡುವುದಕ್ಕೆ ಹೊರಟಿದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವುದಕ್ಕೆ ಸರ್ಕಾರದವರು ನಿರ್ದೇಶನ ಕೊಟ್ಟು ಅವರ ಪಕ್ಷದವರೇ ಗೆಲ್ಲುವಂಥ ರೀತಿಯಲ್ಲಿ ಎಲೆಕ್ಟೋರಲ್ ರೋಲ್‌ನ್ನು ತಯಾರು ಮಾಡಿಕೊಂಡಿರುವುದು ನಮಗೆ ತಿಳಿದುಬಂದಿದೆ. ವಿಧಾನ ಪರಿಷತ್‌ನ ಸದಸ್ಯರು ಅವರವರ ಮತಕ್ಷೇತ್ರಗಳನ್ನು ಅವರವರೇ ಆಯ್ಕೆ ಮಾಡಿಕೊಳ್ಳುವುದಕ್ಕೆ ಇವರು ಚಾಯ್ಸ್ ಕೊಟ್ಟಿದ್ದಾರೆ. ಅವರು ಎಲ್ಲಿ ಬೇಕಾದರೂ ಮತ ನೀಡಬಹುದು. ಅದೇರೀತಿ ರಾಜ್ಯಸಭಾ ಸದಸ್ಯರೂ ಪತಕ್ಕೆ ಮಾಡಬಾರದೆಂದು ನಾನು ಕೇಳಬಯಸುತ್ತೇನೆ. ಪದವೀಧರರ ಕ್ಷೇತ್ರದಿಂದ ಗೆದ್ದಿರುವವರು ರಾಜ್ಯದಲ್ಲಿ ಎಲ್ಲಿ ಬೇಕಾದರೂ ಮತ ನೀಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಇದೇ ಅನುಕೂಲವನ್ನು ಉಪಾಧ್ಯಾಯರ ಕ್ಷೇತ್ರದವರಿಗೂ ಕೊಟ್ಟಿದ್ದೀರಿ. ಆದರೆ ಮುನಿಸಿಪಲ್ ಲಿಮಿಟ್‌ನಲ್ಲಿ ವಾಸ ಆಗಿದ್ದರೆ ಅವರಿಗೆ ಮತ ನೀಡುವ ಅಧಿಕಾರ ಇಲ್ಲವೆಂದು ತಿಳಿಸಿದ್ದೀರಿ. ಉಪಾಧ್ಯಾಯರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಿಂದ ಆರಿಸಿ ಬಂದಿರುವವರಿಗೆ ಯಾವರೀತಿ ಮತ ನೀಡುವುದಕ್ಕೆ ಅವಕಾಶ ಇದೆಯೋ ಅದೇರೀತಿ ರಾಜ್ಯಸಭಾ ಸದಸ್ಯರಿಗೂ ಮತ ನೀಡಲು ಅವಕಾಶ ಇರಬೇಕೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ಮಾನೇಗೌಡರು